**ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.**

**ಸಿ. ಸಿ. ನಂಬರಃ 03–2022**

**ಫಿರ್ಯಾದುದಾರರು** ಶ್ರೀ. ಪರಶುರಾಮ ನಾಗಪ್ಪ ಬಾಸೂರ,
ಪ್ರಾಯಃ ವರ್ಷ, ಉಃ ರೈತಾಬಿ,
ಸಾಃ ರಾಮಾಪುರ, ತಾಃ ಮುಂಡಗೋಡ

**– ವಿರುದ್ಧ –**

**ಆರೋಪಿತರು** ಶ್ರೀ. ಶೆಟ್ಟೆಪ್ಪ ಹನುಮಂತಪ್ಪ ಭೋವಿವಡ್ಡರ,
ಪ್ರಾಯಃ ವರ್ಷ, ಉಃ ರೈತಾಬಿ,
ಸಾಃ ರಾಮಾಪುರ, ತಾಃಮುಂಡಗೋಡ.

**ಆಪಾದನೆ**

ಆರೋಪಿತರಾದ ನೀವು ಪಿರ್ಯಾದಿದಾರನಿಗೆ ಪರಿಚಯಸ್ಥರಿದ್ದು, ನೀವು ಪಿರ್ಯಾದುದಾರನ ಮಾಲಿಕತ್ವದಲ್ಲಿ ಇರುವ ಕೆಎ 21 ಪಿ–4510 ನೇ ನೋಂದಣಿ ಸಂಖ್ಯೆಯ ಮಾರುತಿ ಓಮಿನಿ ಮೋಟಾರು ವಾಹನವನ್ನು ಕ್ರಯ ವಿಕ್ರಯದ ವ್ಯವಹಾರದ ಪ್ರಕಾರ ರೂ.2,50,000/–ಗಳಿಗೆ ಒಪ್ಪಿ ದಿನಾಂಕ 09–11–2020 ರಂದು ಖರೀದಿಗೆ ಪಡೆದು, ಮುಂಗಡವಾಗಿ ಅದೇ ದಿವಸ ರೂ.50,000/– ಗಳನ್ನು ಪಿರ್ಯಾದುದಾರರಿಗೆ ಸಂದಾಯ ಮಾಡಿ, ಉಳಿದ ರಖಂ ರೂ.2,00,000/–ಗಳನ್ನು ಶ್ರೀರಾಮ ಫೈನಾನ್ಸ ಕಂಪನಿಯ ಪಿರ್ಯಾದುದಾರರ ಸಾಲದ ಖಾತೆಗೆ ಬಡ್ಡಿ ಸಮೇತವಾಗಿ ಜಮಾ ಮಾಡಿವುದಾಗಿ ಒಪ್ಪಿ ಸದರಿ ವಾಹನವನ್ನು ಪಡೆದುಕೊಂಡು, ತನ್ನ ಬಾಬ್ತು ಎರಡು ಖಾಲಿ ಸಹಿಯುಳ್ಳ ಕೆನರಾ ಬ್ಯಾಂಕ ಪಾಳಾ ಶಾಖೆಯ ಚಕ್ಕನ್ನು ಪಿರ್ಯದುದಾರರ ಭದ್ರತೆಗೆ ನೀಡಿ, ತದನಂತರ ಆರೋಪಿಯಾದ ನೀವು ಸದರಿ ಶರತ್ತಿನ ಪ್ರಕಾರ ನಡೆದುಕೊಳ್ಳದೆ ಸದರಿ ವಾಹನದ ಮೇಲೆ ಇರುವ ಹಣಕಾಸು ಸಂಸ್ಥೆಯ ಸಾಲದ ಖಾತೆಗೆ ಬಡ್ಡಿ ಸಮೇತವಾಗಿ ಸಂದಾಯ ಮಾಡದೇ ಕಟಬಾಕಿ ಆಗಿರುವ ವಿಚಾರ ಪಿರ್ಯಾದುದಾರರಿಗೆ ತಿಳಿದು ಬಂದ ನಂತರ, ಪಿರ್ಯಾದುದಾರರು ಹಣಕಾಸು ಸಂಸ್ಥೆಯವರನ್ನು ವಿಚಾರಿಸಲಾಗಿ ಅವರ ಸಾಲದ ಖಾತೆಯಲ್ಲಿ ಸದರಿ ವಾಹನದ ಒಟ್ಟು ಸಾದಲ ರಖಂ.3,00,000/–ಗಳು ಬಾಕಿ ಇಟ್ಟಿರುವುದಾಗಿ ತಿಳಿದು ಬಂದಿರುತ್ತದೆ.

ತದನಂತರ ಪಿರ್ಯಾದುದಾರರು ಆರೋಪಿತನನ್ನು ಖುದ್ದಾಗಿ ಸಂಪರ್ಕಿಸಿ ಸದರಿ ವಿಚಾರನ್ನು ಆರೋಪಿತನಿಗೆ ತಿಳಿಸಿ ಭದ್ರತೆಗಾಗಿ ಕೊಟ್ಟ ಚೆಕ್ಕನ್ನು ನಿಮ್ಮ ಭರವಸೆಯ ಮೇರೆಗೆ ಸದ್ರಿ ಚೆಕ್ಕ ನಂ.238741 ನ್ನು ನಿಮ್ಮ ಬ್ಯಾಂಕಾದ ಕೆನರಾ ಬ್ಯಾಂಕ ಪಾಳಾ ರವರಲ್ಲಿ ದಿನಾಂಕ 06–09–2021 ನಗಧೀಕರಣಕ್ಕಾಗಿ ಚೆಕನ್ನು ಹಾಜರ

ಪಡಿಸಿದಾಗ,ನೀವು ಹೊಂದಿರುವ ಖಾತೆಯಲ್ಲಿ "ಸಾಕಷ್ಟು ಹಣ ಇಲ್ಲ" ಎಂದು ಚೆಕ್ಕನ್ನು ಪಿರ್ಯಾದುದರರಿಗೆ ಮಳಿ ನೀಡಿದ್ದು ಇರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 07-09-2021 ರಂದು ತಮ್ಮ ವಕೀಲರ ಮೂಲಕ ನೋಟಸ್‌ನ್ನು ನಿಮಗೆ ನೀಡಿದ್ದು, ಸದ್ರಿ ನೋಟಿಸ್ ಜ್ಯಾರಿಯಾಗಿದ್ದರೂ ಕೂಡಾ ನೀವು ಯಾವುದೇ ರೀತಿಯ ಉತ್ತರ ನೀಡಿರುವುದಿಲ್ಲ ಹಾಗೂ ನಿಗದಿತ ದಿನದೊಳಗೆ ಹಣ ವಾಪಸ್ ಮಾಡಿರುವುದಿಲ್ಲ ಎಂದು ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ –

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ –

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿಃ 31-05-2023

ಪ್ರ. ದ. ನ್ಯಾಯಿಕ ದಂಡಾಧಿಕಾರಿಗಳು,
ಮುಂಡಗೋಡ